# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೇಂದ್ರ ಸರ್ಕಾರದ ಜೀತ ವಿಮುಕ್ತರ ಪುನರ್ವಸತಿ ಕಾರ್ಯಕ್ರಮದಡಿ ರಾಜ್ಯದ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಚಿಂತಾಮಣಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ 2011-12ರಿಂದ 2014-15ರ ವರೆಗೂ ಬಿಡುಗಡೆಯಾಗಿರುವ 923 ಜೀತದಾಳುಗಳಿಗೆ ಪುನರ್ವಸತಿ ಅನುದಾನ (under state component) ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:-

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಉನ್ನತ ಸಮಿತಿ ಸಭೆಯ ನಡವಳಿ ದಿನಾಂಕ-9/3/2017
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/11/ಆರ್‌ಬಿಎಲ್/2014, ದಿನಾಂಕ : 23/5/2015
3) ಸರ್ಕಾರದ ಆದೇಶ ಸಂಖ್ಯೆ-ಗ್ರಾಅಪ/05/ಆರ್‌ಬಿಎಲ್/2012, ಬೆಂಗಳೂರು, ದಿನಾಂಕ-11/2/2014
4) ಸರ್ಕಾರದ ಆದೇಶ ಸಂಖ್ಯೆ-ಗ್ರಾಅಪ/05/ಆರ್‌ಬಿಎಲ್/2012, ಬೆಂಗಳೂರು, ದಿನಾಂಕ-31/1/2013
5) ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 15 ಆರ್‌ಬಿಎಲ್ 2004, ಬೆಂಗಳೂರು ದಿನಾಂಕ 21-02-2006ರಂತೆ
6) ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಪತ್ರ ಸಂಖ್ಯೆ-ಎಂಎಜಿ (1) ಸಿಆರ್/01/2016-17, ದಿನಾಂಕ-21/11/2016
7) ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರ ಪತ್ರ ಸಂಖ್ಯೆ ಜಿಪಂಚಿ/ಆಡಳಿತ/ಜೀವಿಕ/ಸಿಆರ್/2016-17/984 ದಿನಾಂಕ 02/02/2016 ಮತ್ತು 16/02/2017.
8) ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ : ಎಫ್‌ಡಿ 384 Exp-6/2017 ದಿನಾಂಕ 29-07-2017.

**ಪ್ರಸ್ತಾವನೆ:-**

ಜೀತದಾಳುಗಳ ಪುನರ್ವಸತಿ ಯೋಜನೆಯ ಈ ಹಿಂದೆ ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಯೋಜನೆಯಾಗಿದ್ದು, ಶೇ.50:50 ರ ಅನುಪಾತದಲ್ಲಿ ಅನುದಾನವನ್ನು ಭರಿಸಲಾಗುತ್ತಿತ್ತು. ಇದರನ್ವಯ ದಿನಾಂಕ 18-05-2016ರ ಮೊದಲು ಬಿಡುಗಡೆ ಹೊಂದಿದ ಪ್ರತಿ ಜೀತದಾಳಿಗೆ ಪುನರ್ವಸತಿಗಾಗಿ ರೂ.20,000/- ಅನುದಾನವನ್ನು ನೀಡಲಾಗುತ್ತಿತ್ತು. ಯೋಜನೆಯ ಮಾರ್ಗಸೂಚಿಯನ್ನು ಪರಿಷ್ಕೃತ ಜೀತದಾಳು ಪುನರ್ವಸತಿ ಯೋಜನೆಯು ಕೇಂದ್ರ ಪ್ರಾಯೋಜಿತ ಕಾರ್ಯಕ್ರಮವಾಗಿ (Central Sector Scheme) ಆಗಿ ಬದಲಾವಣೆಗೊಂಡಿದೆ.

ಓದಲಾದ (5) ಸರ್ಕಾರದ ಆದೇಶದಂತೆ, ಜೀತದಾಳುಗಳ ಪರಿಸ್ಥಿತಿಯನ್ನು ಸುಧಾರಣೆ ಮಾಡಲು 2005-06ನೇ ಸಾಲಿನಲ್ಲಿ "ಜೀತವಿಮುಕ್ತರ ಸಹಾಯಧನ" ಎಂಬ ಹೊಸ ಯೋಜನೆಯನ್ನು ಜಾರಿಗೆ ಬಂದಿದ್ದು, ಇದರನ್ವಯ ಬಿಡುಗಡೆ ಹೊಂದಿದ ಜೀತದಾಳಿಗೆ ಪ್ರತಿ ತಿಂಗಳಿಗೆ ರೂ.300/- ರಂತೆ 24 ತಿಂಗಳಿಗೆ ಒಟ್ಟು ರೂ.7,200/- ಗಳನ್ನು ನೀಡಲಾಗುವುದು.

ಓದಲಾದ (7) ರಂತೆ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 923 (ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ 247, ಬಾಗೇಪಲ್ಲಿ ತಾಲ್ಲೂಕಿನಲ್ಲಿ 235, ಚಿಂತಾಮಣಿ ತಾಲ್ಲೂಕಿನಲ್ಲಿ 273 ಮತ್ತು ಗುಡಿಬಂಡೆ ತಾಲ್ಲೂಕಿನಲ್ಲಿ 168) ಬಿಡುಗಡೆಯಾಗಿದ್ದು, ಸದರಿ ಜೀತದಾಳುಗಳಿಗೆ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಂಡುಬಂದ 923 ಬಿಡುಗಡೆಗೊಂಡ ಜೀತದಾಳುಗಳಿಗೆ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಪ್ರತಿ ಜೀತದಾಳಿಗೆ ಪ್ರತಿ ತಿಂಗಳಿಗೆ ರೂ.300/-ರಂತೆ * 24 ತಿಂಗಳಿಗೆ

ರೂ.66,45,600/- (ಅರವತ್ತಾರು ಲಕ್ಷದ ನಲವತ್ತೈದು ಸಾವಿರದ ಆರುನೂರು ಮಾತ್ರ) ಚಿಕ್ಕಬಳ್ಳಾಪುರ ಜಿಲ್ಲೆಗೆ ಅನುದಾನವಾಗಿ (under state component) ಬಿಡುಗಡೆ ಮಾಡಬೇಕಾಗಿದೆ. ಅದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 49 ಆರ್‌ಬಿಎಲ್ 2016 (ಭಾಗ-2), ಬೆಂಗಳೂರು, ದಿನಾಂಕ : 05/08/2017**

ಕೇಂದ್ರ ಪುರಸ್ಕೃತ ಜೀತದಾಳುಗಳ ಪುನರ್ವಸತಿ ಯೋಜನೆಯಡಿ 2011-12 ರಿಂದ 2014-15 ರವರೆಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಜೀತವಿಮುಕ್ತರಿಗೆ ತಲಾ ರೂ.300/- ರಂತೆ 923 ಜೀತವಿಮುಕ್ತರಿಗೆ 24 ತಿಂಗಳಿಗೆ ಒಟ್ಟು ರೂ.66,45,600/- (ಅರವತ್ತಾರು ಲಕ್ಷದ ನಲವತ್ತೈದು ಸಾವಿರದ ಆರುನೂರು ಮಾತ್ರ) ಗಳನ್ನು (under state component) ರಡಿ ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

2017-18 ನೇ ಸಾಲಿಗೆ ಜೀತದಾಳುಗಳ ಪುನರ್ವಸತಿ ಯೋಜನೆ ಲೆಕ್ಕ ಶೀರ್ಷಿಕೆ ಲೆಕ್ಕ ಶೀರ್ಷಿಕೆ 2230-00-101-0-01 (ಲಿಂಕ್-2230-ಕಾರ್ಮಿಕ ಮತ್ತು ಉದ್ಯೋಗ-01-ಕಾರ್ಮಿಕ-198-ಗ್ರಾಮ ಪಂಚಾಯಿತಿಗಳಿಗೆ ಸಹಾಯ -6-ಗ್ರಾಮ ಪಂಚಾಯಿತಿಗಳು-ಕೇಂದ್ರ ಪುರಸ್ಕೃತ ಯೋಜನೆ (ಜೀತದಾಳುಗಳ ಪುನರ್ವಸತಿ)-01-ಬ್ಲಾಕ್ ಅನುದಾನ) ರಡಿ ನಿಗದಿಪಡಿಸಿರುವ ರೂ.422.00 ಲಕ್ಷಗಳಲ್ಲಿ ಮೈಸೂರು ಮತ್ತು ತುಮಕೂರು ಜಿಲ್ಲೆಗಳಿಗೆ ಬಿಡುಗಡೆಗೊಳಿಸಿ, ಉಳಿಕೆಯಾಗುವ ರೂ.270.40 ಲಕ್ಷಗಳಲ್ಲಿ ರೂ.66,45,600/- ಗಳನ್ನು ರಾಜ್ಯ ಪಾಲಿನ ಅನುದಾನದಲ್ಲಿ ಬಿಡುಗಡೆ ಮಾಡಿದೆ. ಈ ಅನುದಾನವನ್ನು ಕೆಳಕಂಡ ಷರತ್ತಿಗೆ ಒಳಪಟ್ಟು ಜೀತವಿಮುಕ್ತರಿಗೆ ಪುನರ್ವಸತಿ ಕಲ್ಪಿಸುವ ಉದ್ದೇಶಕ್ಕೆ ಮಾತ್ರ ನಿಯಮಾನುಸಾರ ಬಳಸತಕ್ಕದ್ದು.

**ಷರತ್ತುಗಳು:**

1. 923 ಜೀತವಿಮುಕ್ತರು ಈ ಹಿಂದೆ ಜೀತದಾಳುಗಳಾಗಿದ್ದರು, ಇವರುಗಳನ್ನು ಜೀತಕ್ಕಿರಿಸಿಕೊಂಡ ಮಾಲೀಕರನ್ನು ಫೀರ್ಯಾದು ಮಾಡಲು ಪ್ರತ್ಯೇಕವಾಗಿ ಕ್ರಮತೆಗೆದುಕೊಳ್ಳಲಾಗುತ್ತದೆಂಬ ಬಗ್ಗೆ ದೃಢೀಕರಣವನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಪಡೆದುಕೊಂಡು ಸದರಿ ಜೀತವಿಮುಕ್ತರಿಗೆ ಪುನರ್ವಸತಿ ಕಲ್ಪಿಸುವುದು.
2. ಕೇಂದ್ರ ಸರ್ಕಾರದ ದಿನಾಂಕ-8/3/2013ರ ಆದೇಶದಲ್ಲಿ ಸೂಚಿಸಿರುವ ಮಾರ್ಗಸೂಚಿಗಳ ಅನುಸಾರ ಪುನರ್ವಸತಿ ಅನುದಾನವನ್ನು ವೆಚ್ಚ ಮಾಡತಕ್ಕದ್ದು ಹಾಗೂ ಕೇಂದ್ರ ಪುರಸ್ಕೃತ ಜೀತ ವಿಮುಕ್ತರ ಪುನರ್ವಸತಿ ಯೋಜನೆಯಡಿ ಸ್ವೀಕೃತವಾದ ಪೂರ್ಣ ಅನುದಾನಕ್ಕೆ ಪ್ರತ್ಯೇಕ ವಹಿಯನ್ನು ನಿರ್ವಹಿಸತಕ್ಕದ್ದು.
3. ಭಾರತದ ಕಂಟ್ರೋಲರ್ ಮತ್ತು ಮಹಾಲೇಖಪಾಲರು ಇಚ್ಚೆ ಪಟ್ಟಲ್ಲಿ ಟೆಸ್ಟ್ ಚೆಕ್‌ಗೆ ಒದಗಿಸಲು ಪ್ರತಿ ಯೋಜನೆವಾರು ವೆಚ್ಚದ ಲೆಕ್ಕ ಪತ್ರಗಳನ್ನು ಸದರಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಅವರ ಕಛೇರಿಯಲ್ಲಿ ನಿರ್ವಹಿಸತಕ್ಕದ್ದು.
4. 1976 ಜೀತ ಪದ್ಧತಿ (ರದ್ಧತಿ) ಕಾಯ್ದೆ ಹಾಗೂ ಅದರಡಿ ರೂಪಿಸಿರುವ ನಿಯಮಗಳಂತೆ ಗುರುತಿಸಿ ಜೀತಪದ್ಧತಿ ಯಿಂದ ಬಿಡುಗಡೆಗೊಳಿಸಲಾದ ಜೀತವಿಮುಕ್ತರಿಗೆ ಮಾತ್ರ ಈ ಯೋಜನೆಯಡಿ ಸಹಾಯ ಸೌಲಭ್ಯ ಕಲ್ಪಿಸತಕ್ಕದ್ದು.
5. ಈ ಆದೇಶದಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ತಕ್ಷಣ ಪ್ರಸಕ್ತ ಸಾಲಿನಲ್ಲೇ ಖಜಾನೆಯಿಂದ ಸೆಳೆಯಲು ಕ್ರಮವಹಿಸಿ, ತುರ್ತಾಗಿ ಜೀತವಿಮುಕ್ತರ ಪುನರ್ವಸತಿಹೆ ವಿನಿಯೋಗಿಸಬೇಕು ಹಾಗೂ ಈ ಅನುದಾನವು ಯಾವುದೇ ಕಾರಣಕ್ಕೂ ವ್ಯಪಗತವಾಗಬಾರದು, ಕಾರಣ ನವೀಕರಿಸಲು ಅವಕಾಶವಿರುವುದಿಲ್ಲ.
6. ಪುನರ್ವಸತಿ ಅನುದಾನವನ್ನು ಜೀತವಿಮುಕ್ತರಿಗೆ ವಿತರಿಸುವ ಸಮಯದಲ್ಲಿ ಮೇಲೆ ಓದಲಾದ-2ರ ಸರ್ಕಾರದ ಆದೇಶದ ಮಾರ್ಗಸೂಚಿಯನ್ವಯವೇ ಕಡ್ಡಾಯವಾಗಿ ವಿತರಿಸಬೇಕು. (ಸರ್ಕಾರಿ ಆದೇಶದ ಮಾರ್ಗಸೂಚಿ ಕ್ರಮ ಸಂಖ್ಯೆ- 5, 6 ಮತ್ತು 7) ಹಾಗೂ ಈ ಸಂಬಂಧ ಆಯಾ ತಾಲ್ಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಅಗತ್ಯ ಕ್ರಮ ವಹಿಸತಕ್ಕದ್ದು.
7. ವೆಚ್ಚ ಮಾಡಲಾದ ಅನುದಾನಕ್ಕೆ ಫಲಾನುಭವಿವಾರು ವಿವರ, ಹಣ ಬಳಕೆ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಲಾದ ತಖ್ತೆಗಳನ್ನು ಸರ್ಕಾರಕ್ಕೆ 15 ದಿನಗಳೊಳಗಾಗಿ ತಪ್ಪದೇ ಕಳುಹಿಸತಕ್ಕದ್ದು. ಕೇಂದ್ರ ಸರ್ಕಾರವು

ನಿಗದಿಪಡಿಸಿರುವ ನಮೂನೆಯಲ್ಲಿ ಪ್ರತಿ ಮಾಹೆಯೂ ಭೌತಿಕ ಹಾಗೂ ಆರ್ಥಿಕ ಪ್ರಗತಿ ವರದಿಗಳನ್ನು ಹಾಗೂ ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ನಿಗದಿಪಡಿಸಿದ ಹಕ್ಕುಗಳ ನಮೂನೆಯಲ್ಲಿಯೇ ಅರ್ಧ ವಾರ್ಷಿಕ ಪ್ರಗತಿ ವರದಿಗಳನ್ನು ನಿಯತಕಾಲಿಕವಾಗಿ ತಪ್ಪದೇ ನಿರ್ದೇಶಕರು (ಗ್ರಾಮೂಸೌ-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸತಕ್ಕದ್ದು.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ ಆಇ/384/ವೆಚ್ಚ-6/2017, ದಿನಾಂಕ 29-07-2017 ರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್ ಕೃಷ್ಣಪ್ಪ)
ನಿರ್ದೇಶಕರು (ಗ್ರಾ.ಮೂ.ಸೌ-2) ಹಾಗೂ
ಪ.ನಿ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
karsgsy@gmail.com Ph.No.080-2235 3852

ಮಾಹಿತಿ ಹಾಗೂ ಅವಶ್ಯ ಕ್ರಮಕ್ಕಾಗಿ: ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಇವರಿಗೆ, ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರುರವರಿಗೆ ಈ ಆದೇಶವನ್ನು ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ.

**ಪ್ರತಿಯನ್ನು:**

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ.
3. ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಚಿಂತಾಮಣಿ ಮತ್ತು ಗುಡಿಬಂಡೆ, ಚಿಕ್ಕಬಳ್ಳಾಪುರ
4. ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
5. ಮುಖ್ಯ ಲೆಕ್ಕಾಧಿಕಾರಿ. ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
6. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
7. ಕಾರ್ಯನಿರ್ವಾಹಕಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಚಿಂತಾಮಣಿ ಮತ್ತು ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ
8. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ಬೆಂಗಳೂರು.
9. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಾಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
10. ಜಿಲ್ಲಾ ಖಜಾನಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ.
11. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-6, ವಿಧಾನಸೌಧ, ಬೆಂಗಳೂರು
12. ಆಂತರಿಕ ಆರ್ಥಿಕ ಸಲಹೆಗಾರರು/ನಿರ್ದೇಶಕರು (ಯೋಉಮಾ) ವಿಭಾಗ, ಪ್ರಧಾನ ಸಂಪಾದಕರು, ಕರ್ನಾಟಕ ವಿಕಾಸ, ನಿರ್ದೇಶಕರು, ಗಣಕ ಕೋಶ-ಇಲಾಖಾ ತಂತ್ರಾಂಶದಲ್ಲಿ ಪ್ರಕಟಿಸಲು ಕೋರಿ, ಗ್ರಾಅಪಂರಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪಂರಾ ಇಲಾಖೆ
14. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ವಿಭಾಗ, ಗ್ರಾಅಪಂರಾ ಇಲಾಖೆ
15. ಹೆಚ್ಚುವರಿ ಪ್ರತಿಗಳು.

***